# ಹಸಿವು ನೀಗಿಸುವ ICYM ಯುವಪಡೆ

## ಮಂಗಳೂರು ಧರ್ಮಪ್ರಾಂತ್ಯದ ಯುವಜನರ **ಶೇರ್ ಏಂಡ್ ಕೇರ್ ಯೋಜನೆ**

ಕೊರೊನಾ ಸಂದರ್ಭದ ಲಾಕ್‌ಡೌನ್‌ನಿಂದಾಗಿ ಜನರ ಸಂಕಷ್ಟಗಳಿಗೆ ಸ್ಪಂದಿಸಲು ಹಲವಾರು ಸಂಘಸಂಸ್ಥೆಗಳು ವಿವಿಧ ರೀತಿಯಲ್ಲಿ ಕೈಜೋಡಿಸಿರುತ್ತಾರೆ. ಇದರಲ್ಲಿ ಮಂಗಳೂರು ಧರ್ಮಪ್ರಾಂತ್ಯದ ಭಾರತೀಯ ಕಥೊಲಿಕ ಯುವ ಸಂಚಾಲನ (ICYM) ಕೂಡ ಒಂದಾಗಿದೆ.

ಮಂಗಳೂರು ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷರಾದ ಅತೀ ವಂದನೀಯ ಪೀಟರ್ ಪಾವ್ಲ್ ಸಲ್ಡಾನ್ಹಾರವರು ಮೇ 2, 2021 ರಂದು "**ಮಿಷನ್ ಶೇರ್ ಆಂಡ್ ಕೇರ್**" ಶೀರ್ಷಿಕೆಯಲ್ಲಿ ಈ ವಿಭಿನ್ನ ಹಸಿವು ನೀಗಿಸುವ ಯೋಜನೆಗೆ ಚಾಲನೆ ನೀಡಿ ಶುಭ ಹಾರೈಸಿದ್ದರು. ಈ ಯೋಜನೆಯು ಮಂಗಳೂರು ಧರ್ಮಪ್ರಾಂತ್ಯದ ಐ.ಸಿ.ವೈ.ಎಮ್. ನಿರ್ದೇಶಕರಾದ ವಂದನೀಯ ಗುರು ಅಶ್ವಿನ್ ಕಾರ್ಡೋಜಾ ಇವರ ಮಾರ್ಗದರ್ಶನದಲ್ಲಿ, ಹಾಗೂ ಅಧ್ಯಕ್ಷರಾದ ಲಿಯೋನ್ ಸಲ್ಡಾನ್ಹಾ ಇವರ ನೇತ್ರತ್ವದಲ್ಲಿ ನಡೆಯುತ್ತಿದ್ದು, ಹಲವಾರು ಯುವಕರು ದಿನಂಪ್ರತಿ ಈ ಕಾರ್ಯದಲ್ಲಿ ನಿರತರಾಗಿದ್ದಾರೆ.

"**ಮಿಷನ್ ಶೇರ್ ಏಂಡ್ ಕೇರ್**" ಎಂಬ ಶೀರ್ಷಿಕೆಯಡಿಯಲ್ಲಿ, ಯೋಜನೆಗೆ ಚಾಲನೆ ನೀಡಿದ ದಿನದಿಂದ ಇಂದಿನ ತನಕ ಪ್ರತಿದಿನ ಮಧ್ಯಾಹ್ನ 11.30 ರಿಂದ 2.30 ತನಕ ಬೀದಿಗಳಲ್ಲಿ ಆಹಾರದ ಅವಶ್ಯಕತೆ ಇರುವ ಜನರಿಗೆ 150 ರಿಂದ 200 ಪ್ಯಾಕೆಟ್ ಊಟವನ್ನು ನೀಡಲಾಗುತ್ತಿದ್ದು, ಇದುವರೆಗೆ ಸುಮಾರು 5750 ಪ್ಯಾಕೆಟ್ ಆಹಾರವನ್ನು, 4500 ಬಾಟಲಿ ನೀರನ್ನು ಹಾಗೂ 2500 ಮಾಸ್ಕಗಳನ್ನು, ಜಿಲ್ಲಾಡಳಿತದ ಮೂಲಕ ನಿಗದಿ ಮಾಡಿದ ಮಂಗಳೂರಿನ ಆಯ್ದ ಪ್ರದೇಶಗಳಾದ ಬಂದರು-ಧಕ್ಕೆ, ಉರ್ವ, ಕೊಟ್ಟಾರ ಚೌಕಿ, ಕೂಳೂರು, ಪಣಂಬೂರು, ಸುರತ್ಕಲ್ ಭಾಗಗಳಲ್ಲಿ ನೀಡಲಾಗುತ್ತಿದೆ.

ಮಧ್ಯಾಹ್ನದ ಬಳಿಕ ಬಡಕುಟುಂಬಗಳಿಗೆ ಅವಶ್ಯಕವಿರುವ ಅಕ್ಕಿ, ಗೋಧಿ, ಸಕ್ಕರೆ, ಚಹಾ ಹುಡಿ, ಎಣ್ಣೆ, ಈರುಳ್ಳಿ, ಅವಲಕ್ಕಿ, ಉಪ್ಪು, ದವಸಧಾನ್ಯಗಳು, ಸಾಂಬಾರು ಪದಾರ್ಥ ಇತ್ಯಾದಿಗಳ ಆಹಾರ ಸಾಮಾಗ್ರಿ ಕಿಟ್‌ಗಳನ್ನು ನೀಡಲಾಗುತ್ತಿದ್ದು ಕಳೆದ 32 ದಿನಗಳಿಂದ ಸುಮಾರು 500ಕ್ಕಿಂತಲೂ ಹೆಚ್ಚು ಕಿಟ್‌ಗಳನ್ನು ವಿತರಿಸಲಾಗಿದೆ, ಹಾಗೂ ಲಾಕ್‌ಡೌನ್ ಇರುವವರೆಗೆ ಇದನ್ನು ಕೊಡಲಾಗುವುದು.

ಈ ಯೋಜನೆಯನ್ನು ನೆರವೇರಿಸಲು ಆಶೀರ್ವಚನ ನೀಡಿದ ಮಂಗಳೂರು ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷರಾದ ಅತೀ ವಂದನೀಯ ಪೀಟರ್ ಪಾವ್ಲ್ ಸಲ್ಡಾನ್ಹಾ ಹಾಗೂ ಸಹಕರಿಸಿದ ಎಲ್ಲಾ ದಾನಿಗಳಿಗೆ , ಸಂಘಟನೆಯ ಸರ್ವ ಯುವ ಜನರಿಗೆ ಹಾಗೂ ಹಿತೈಷಿಗಳಿಗೆ ಭಾರತೀಯ ಕಥೊಲಿಕ ಯುವ ಸಂಚಾಲನವು ಅಭಾರಿಯಾಗಿದೆ.

ಮಿನೋಲ್ ಬ್ರ್ಯಾಗ್ಸ್

P.R.O.

ICYM ಮಂಗಳೂರು ಧರ್ಮಪ್ರಾಂತ್ಯ